ಅಧ್ಯಕ್ಷರು : ಎಲ್ಲಾ ಅರ್ಜಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಗಳನ್ನೊಪ್ಪಿಸುವುದು

1. ಶ್ರೀ ವಿ.ಎಸ್. ಕೌಜಲಗಿ : ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಗಳ ವಿಷಯ ಸಮಿತಿಗಳಿಗೆ ಸಂಬಂಧಿಸಿದಂತೆ ನಿಯಮಗಳ ಸಮಿತಿಯ ವರದಿಯನ್ನೊಪ್ಪಿಸುತ್ತೇನೆ.
2. ಶ್ರೀ ಎಸ್.ಎಂ. ಯಾಹ್ಯಾ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಧೇಯಕದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನೊಪ್ಪಿಸುತ್ತೇನೆ.
3. ಶ್ರೀ ಕೆ. ಶಿವಮೂರ್ತಿ : ಮಾನ್ಯ ಅಧ್ಯಕ್ಷರೇ, ವಿಧಾನ ಸಭೆಯ ಹಕ್ಕುಭಾಧ್ಯತಾ ಸಮಿತಿಯ 3ನೇ ಹಾಗೂ 4ನೇ ವರದಿಯನ್ನೊಪ್ಪಿಸುತ್ತೇನೆ.
4. ಶ್ರೀ ಕೆ.ಬಿ. ಕೋಳಿವಾಡ : ಮಾನ್ಯ ಅಧ್ಯಕ್ಷರೇ, ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿಯ 12ನೇ ವರದಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು : ಈ ಎಲ್ಲಾ ವರದಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ

ಅ) "ಭಾರತ ಸಂವಿಧಾನದ 205(1) ಅನುಚ್ಛೇದದ ಮೇರೆಗೆ 1993-94ನೇ ಸಾಲಿಗೆ ಸಂಬಂಧಿಸಿದಂತೆ ಅನುಪೂರಕ ಅಂದಾಜು (ಮೊದಲನೆ ಕಂತು)ಗಳನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಆ) "ಭಾರತ ಸಂವಿಧಾನದ 205(1) (ಬ)ಅನುಚ್ಛೇದದ ಮೇರೆಗೆ 1985-86ಹಾಗೂ 1986-87ರಲ್ಲಿ ಪುರಸ್ಕೃತವಾದ ಅನುದಾನ ವಿನಿಯೋಗಗಳಿಗೆ ಮತ್ತು ಪ್ರಬುದ್ಧ ವಿನಿಯೋಗಗಳಿಗೆ ಹೆಚ್ಚಿಗೆಯಾಗಿ ಭರಿಸಿದ ವೆಚ್ಚಗಳನ್ನು ಸಕ್ರಮಗೊಳಿಸುವುದನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ಸಭೆಯ ಮುಂದೆ ಒಪ್ಪಿಸಲಾಯಿತು, ಈಗ ಭಟ್ಕಳದಲ್ಲಿ ನಡೆದ ಗಲಭೆ ಬಗ್ಗೆ ಪ್ರಸ್ತಾವನೆ. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

(ಅ) ಭಟ್ಕಳದಲ್ಲಿ ನಡೆದ ಗಲಭೆ ಬಗ್ಗೆ

+ ಶ್ರೀ ಆರ್.ಎನ್. ನಾಯಕ್ (ಭಟ್ಕಳ) : ಮಾನ್ಯ ಅಧ್ಯಕ್ಷರೇ, ಭಟ್ಕಳದಲ್ಲಿ ಗಲಾಟೆಯಾದ ಬಗ್ಗೆ ನಾನು ನಿಮ್ಮ ಗಮನ ಸೆಳೆಯುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ನಮ್ಮ ಉತ್ತರ ಕನ್ನಡ ಜಿಲ್ಲೆಯ ಶಾಸಕರನ್ನು, ವಿರೋಧ ಪಕ್ಷದ ನಾಯಕರನ್ನು ಕರೆಸಿ ಅದರ ಬಗ್ಗೆ ಚರ್ಚೆ ಮಾಡುತ್ತೇನೆ ಎಂದು ಹೇಳಿದ್ದರು. ಆದರೆ ಅವರಿಗೆ ಸಮಯ ಇದೆಯೋಗ ಇಲ್ಲವೋ ಗೊತ್ತಿಲ್ಲ. 2 ದಿವಸದಿಂದ ಅದು ಮುಂದೆ ಹೋಗುತ್ತಿದೆ. ಬಹುಶಃ ಇವತ್ತು ಸಭೆ ಮುಂದೆ ಹೋದರೆ ಅದರ ವಿಚಾರವಾಗಿ ಇಲ್ಲಿ ನನು ಪ್ರಸ್ತಾಪ ಮಾಡುವುದಕ್ಕೇ ಸಾಧ್ಯವಾಗುವುದಿಲ್ಲ. ಆ ಕಾರಣಕ್ಕಾಗಿ ಈಗ ಮುಂದಿನ ಚರ್ಚೆ ಪ್ರಾರಂಭವಾಗುವುದಕ್ಕೆ ಪೂರ್ವದಲ್ಲಿ, ಭಟ್ಕಳದಲ್ಲಿ ನಡೆಯುತ್ತಿರುವ ಗಲಭೆ ಬಗ್ಗೆ ನಾನು ಗಮನ ಸೆಳೆದ ಬಗ್ಗೆ ಚರ್ಚಿಸಲು ತಾವು ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ, ಇದು ಬಹಳ ಪ್ರಾಮುಖ್ಯವಾದ ವಿಚಾರ ಎಂದು ತಿಳಿದು ತೆಗೆದುಕೊಳ್ಳಬೇಕು. ಅಲ್ಲಿ ಈಗಾಗಲೇ 13 ಜನ ಕೋಮುಗಲಭೆಯಲ್ಲಿ ಸತ್ತಿದ್ದಾರೆ.